C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.132/2021

ದಿನಾಂಕಃ 08.08.2022 ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ:6 ಪಿ. ಡಬ್ಲ್ಯೂ:4

| | |
|---|---|
| ಸಾಕ್ಷಿದಾರರ ಹೆಸರು | ಚನ್ನಯ್ಯ |
| ತಂದೆಯ ಹೆಸರು | ದೇವರಗುಡ್ಡಯ್ಯ |
| ವಯಸ್ಸು | 51 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ | ಹುಣಸೂರು |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಮೃತ ಅಕ್ಷಯ್ ನನ್ನ ಮಗ. ಮೃತ ಅಕ್ಷಯ್ ಯಾವುದೋ ಕಂಪನಿಗೆ ಕೆಲಸಕ್ಕೆ ಹೋಗುತ್ತಿದ್ದ ವಿಷಯ ಮಾತ್ರ ಗೊತ್ತಿತ್ತು . ವಾರಕ್ಕೆ ಅಥವಾ 10 ದಿವಸಕ್ಕೆ ಒಮ್ಮೆ ಅಕ್ಷಯ್ ಮನೆಗೆ ಬಂದು ಹೋಗುತ್ತಿದ್ದನು. ಅಕ್ಷಯ್ ತೀರಿಕೊಂಡು ಒಂದು ವರ್ಷದ ಮೇಲೆ 2 ತಿಂಗಳು ಆಗಿದೆ. ಮಂಡ್ಯ ಪೊಲೀಸರು ನನ್ನ ಮಗ ತೀರಿಕೊಂಡಿದ್ದ ವಿಷಯವನ್ನು ನನಗೆ ತಿಳಿಸಿದರು ಹಾಗೂ ಆಸ್ಪತ್ರೆ ಹತ್ತಿರ ಬರುವಂತೆ ಹೇಳಿದರು. ನಾನು ಆಸ್ಪತ್ರೆಗೆ ಹೋಗಿ ನನ್ನ ಮಗನ ಶವವನ್ನು ನೋಡಿದೆನು. ಶವದ ಎದೆಯ ಭಾಗದ ಮೇಲೆ ಮತ್ತು ಹಿಂಭಾಗದ ಮೇಲೆ ಚುಚ್ಚಿದ ಗಾಯಗಳು ಆಗಿತ್ತು. ಸುಂಡಹಳ್ಳಿ ಕಾಲುವೆ ಹತ್ತಿರ ಹೆಣ ಸಿಕ್ಕಿತ್ತು, ಮಹಜರ್ ಮಾಡಿಕೊಂಡು ಬಂದಿದ್ದೇವೆ ಅಂತ ಪೊಲೀಸರು ಹೇಳಿದರು. ಚಾಸಾ.1 ಯಾರು ಅಂತ ನನಗೆ ಗೊತ್ತಿರಲಿಲ್ಲ. ಕಂಪ್ಲೆಂಟನ್ನು ಕೊಟ್ಟ ಮೇಲೆ, ಚಾಸಾ.1 ಪೂಜಾ ಮೃತ ಅಕ್ಷಯ್‌ನ ಹೆಂಡತಿ ಅಂತ ಗೊತ್ತಾಯಿತು. ಯಾರೋ ಕೊಲೆ ಮಾಡಿ ನನ್ನ ಮಗನನ್ನು ಸಾಯಿಸಿದ್ದರು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಆರ್.ಕೆ. ವಕೀಲರಿಂದಃ</u>

ನಾನು ಯಾವುದೇ ಹೇಳಿಕೆಯನ್ನು ಕೊಟ್ಟು ಬರೆಸಿಲ್ಲ. ನನಗೆ ಸಹಿ ಮಾಡುವಂತೆ ಹೇಳಿದರು, ಸಹಿ ಮಾಡಿದೆನು. ನಾನು ಬರೆದಿದ್ದ ವಿಷಯವನ್ನು ಓದಿ ತಿಳಿದುಕೊಂಡಿಲ್ಲ. ಕೇಸಿನ ಬಗ್ಗೆ ನನಗೆ ಏನು ಗೊತ್ತಿಲ್ಲದೆ ಇದ್ದರೂ ಸಹಾ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.